ಅಶಕ್ಯಳಾದಳು. 'ಒಂದು ವೇಳೆ ನಿನ್ನ ಫ್ಲೈಟ್ ನಿನ್ನನ್ನು ಬಿಟ್ಟು ಹೊರಟಿದ್ದಿದ್ದೇ ಆಗಿದ್ದರೆ, ನೀನು ಚಿಂತಿಸಿ ಪ್ರಯೋಜನವಿಲ್ಲ. ನೀನು ಅದನ್ನು ಒಪ್ಪಿಕೊಳ್ಳುವುದು ಲೇಸು. ಆಕಾಶವೇನು ಕಳಚಿ ನಿನ್ನ ತಲೆಯ ಮೇಲೆ ಬೀಳುವುದಿಲ್ಲ.' ಅವಳ ಗಾಯಗಳಿಗೆ ಉಪ್ಪನ್ನು ತಿಕ್ಕುತ್ತಾ ಹೇಳಿದರು ಮಿಸ್ಟರ್ ಫೋಸ್ಟರ್. ಮಿಸೆಸ್ ಫೋಸ್ಟರ್ ಕಾರಿನ ಪಕ್ಕದ ಗಾಜಿನಿಂದ ಹೊರಗೆ ದೃಷ್ಟಿ ತೂರಿದಳು. ದಟ್ಟವಾಗಿ ಹರಡಿದ್ದ ಮಂಜಿನೊಳಗಿನಿಂದ ಹೊರಗೆ ಏನೂ ಕಾಣಿಸುತ್ತಿರಲಿಲ್ಲ. ಮುಂದೆ ಮುಂದೆ ಹೋಗುತ್ತಿದ್ದಂತೆ ಮಂಜು ಮತ್ತೂ ದಟ್ಟವಾಗತೊಡಗಿತು. ಮಿಸ್ಟರ್ ಫೋಸ್ಟರ್ ತನ್ನನ್ನೇ ಗಮನಿಸುತ್ತಿದ್ದಾರೆಂದು ಅವಳ ಗಮನಕ್ಕೆ ಬಂದಿತು. ಅವಳು ಗಂಡನ ಕಡೆಗೆ ನೋಡಿದಳು. ಗಂಡನ ದೃಷ್ಟಿ ಅವಳ ಎಡಗಣ್ಣಿನ ಮೇಲೆ ಮಿಡಿಯುತ್ತಿದ್ದ ನರದ ಮೇಲೆಯೇ ನೆಟ್ಟಿರುವುದು ಕಂಡು ಆಕೆ ಅಧೀರಳಾದಳು.

'ನಿನಗೆ ಒಪ್ಪಿಕೊಳ್ಳುವುದು ಬೇಕಿಲ್ಲ?' ಮಿಸ್ಟರ್ ಫೋಸ್ಟರ್ ಮತ್ತೊಮ್ಮೆ ಕೇಳಿದರು.

'ಏನನ್ನು ಒಪ್ಪಿಕೊಳ್ಳುವುದು ಬೇಕಿಲ್ಲ ಅಂದಿರಿ?' ಅವಳ ದನಿ ಅದ್ಯಾಕೊ ಕೊಂಚ ಖಾರವಾಗಿಯೇ ಇತ್ತು!

'ನಿನ್ನ ಫ್ಲೈಟ್ ಸಮಯಕ್ಕೆ ಸರಿಯಾಗಿ ಹೊರಟಿದ್ದೇ ಆದರೆ, ಅದು ಖಂಡಿತವಾಗಿಯೂ ನಿನಗೆ ತಪ್ಪಿತು ಅಂತಲೇ... ಅಲ್ಲದೇ, ಈ ಮಂಜಿನಲ್ಲಿ ನಮ್ಮ ಕಾರು ಇದಕ್ಕಿಂತ ವೇಗವಾಗಿ ಹೋಗಲು ಖಂಡಿತವಾಗಿಯೂ ಸಾಧ್ಯವಿಲ್ಲ. ಇದನ್ನು ಒಪ್ಪಿಕೊಂಡು ರಾಜಿಯಾಗುವುದು ನಿನಗೆ ಒಳ್ಳೇದು.'

ಮಿಸ್ಟರ್ ಫೋಸ್ಟರ್ ಮುಂದೆ ಮಾತನಾಡಲಿಲ್ಲ. ಕಾರು ಮೆಲ್ಲಗೆ ಹೋಗುತ್ತಿತ್ತು. ಚಾಲಕ ಹಳದಿ ದೀಪಗಳನ್ನು ಉರಿಸಿದ್ದನಾದ್ದರಿಂದ ರಸ್ತೆಯ ಅಂಚು ಅವನಿಗೆ ಕಾಣಿಸುತ್ತಿತ್ತು. ಅವರಿಗೆ ಎದುರಾಗಿ ಹಳದಿ ದೀಪಗಳು ಅವರನ್ನು ಹಾದು ಹೋಗುತ್ತಿದ್ದವು.

ಅದ್ಯಾಕೋ ಕಾರು ಒಮ್ಮೆಲೇ ನಿಂತು ಕೊಂಡಿತು.

'ಹೀಗಾಗುತ್ತದೆಂದು ನನಗೆ ಖಂಡಿತವಾಗಿಯೂ ಗೊತ್ತಿತ್ತು.' ಮಿಸ್ಟರ್ ಫೋಸ್ಟರ್ ಹೇಳಿದರು.

'ಇಲ್ಲ ಸರ್. ನಾನೇ ನಿಲ್ಲಿಸಿದೆ. ನಾವು ಏರ್‌ಪೋರ್ಟ್ ತಲುಪಿದೆವು.'

ಮಿಸೆಸ್ ಫೋಸ್ಟರ್ ಹಿಂದೆ ಮುಂದೆ ನೋಡದೆ ಸೀದಾ ಏರ್‌ಪೋರ್ಟಿನ ದ್ವಾರದೊಳಗೆ ಅವಸರವಸರದಿಂದ ನುಗ್ಗಿದಳು. ಟಿಕೆಟ್ ಕೌಂಟರಿನ ಮುಂದೆ ಜನ ಕಿಕ್ಕಿರಿದಿದ್ದರು. ಎಲ್ಲರ ಮುಖಗಳಲ್ಲೂ ಆತಂಕ ತುಂಬಿಕೊಂಡಿತ್ತು. ಆಕೆ, ಹೇಗೋ ಜನಸಂದಣಿಯೊಳಗೆ ನುಗ್ಗಿ ಟಿಕೆಟ್ ಕೌಂಟರಿನ ಗುಮಾಸ್ತನೊಡನೆ ಮಾತನಾಡತೊಡಗಿದಳು.

'ಹೌದು ಮೇಡಂ. ನಿಮ್ಮ ಫ್ಲೈಟನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ನೀವು ಎಲ್ಲೂ ಹೋಗಬೇಡಿ. ಯಾವ ಗಳಿಗೆಯಲ್ಲದರೂ ವಾತಾವರಣ ತಿಳಿಯಾಗಬಹುದು. ನಾವು ಅನೌನ್ಸ್ ಮಾಡುತ್ತೇವೆ.'

ಮಿಸೆಸ್ ಫೋಸ್ಟರ್ ಕಾರಿನ ಬಳಿಗೆ ಬಂದಳು. ಗಂಡ ಕೆಳಗೆ ಇಳಿದಿರಲಿಲ್ಲ. ಫ್ಲೈಟನ್ನು ಮುಂದೂಡಿರುವುದನ್ನು ತಿಳಿಸಿ, 'ನೀನು ಹೋಗು ಡಿಯರ್. ಇಲ್ಲಿ ಕಾದು ಕುಳಿತು ಏನೂ ಪ್ರಯೋಜನವಿಲ್ಲ' ಎಂದಳು.

'ಖಂಡಿತ, ಖಂಡಿತ ಡಾರ್ಲಿಂಗ್. ಏನಪ್ಪಾ ಡ್ರೈವರ್? ನಾವು ಸುರಕ್ಷಿತವಾಗಿ ವಾಪಸ್ಸಾಗಬಹುದೇ? ನಾನಂತೂ ರೆಡಿ.'

'ಏನೂ ತೊಂದರೆ ಇಲ್ಲ, ಸರ್.'

'ಸಾಮಾನೆಲ್ಲಾ ಹೊರಗೆ ತೆಗೆದಿದೆ ತಾನೆ?'